# EDUCATION VENTURES VISIT

29 OKTOBER

-

4 NOVEMBER 2017

BERICHTGEVING IN DE MEDIA

FLANDERS INNOVATION & ENTREPRENEURSHIP

Flanders State of the Art

INDIA PLATFORM

Krantenartikel ‘Team from Belgium visits Mangala Jyothi’, *Udayavani Sudina*, 6 november 2017, verschenen online (http://epaper.udayavani.com/) en in gedrukte pers

# ಮಂಗಳಜ್ಯೋತಿ ಶಾಲೆಗೆ ಬೆಲ್ಜಿಯಂ ತಂಡ ಭೇಟಿ



ಎಸ್‌ಡಿಎಂ ಮಂಗಳಜ್ಯೋತಿ ಸಮಗ್ರ ಶಾಲೆಗೆ ಬೆಲ್ಜಿಯಂನ ಶಿಕ್ಷಣ ತಜ್ಞರು ಭೇಟಿ ನೀಡಿದರು.

**ವಾಮಂಜೂರು**, ನ. 6: ಇಲ್ಲಿನ ಎಸ್‌ಡಿಎಂ ಮಂಗಳಜ್ಯೋತಿ ಸಮಗ್ರ ಶಾಲೆಗೆ ಬೆಲ್ಜಿಯಂನ ಗೆಂಟ್ ಯುನಿವರ್ಸಿಟಿಯ ವಿಶೇಷ ಶಿಕ್ಷಣ ತಜ್ಞರು ಭೇಟಿ ನೀಡಿದರು.

## ವಿವಿಧ ವಿಭಾಗಗಳಿಗೆ ಭೇಟಿ

ಸಂಸ್ಥೆಯ ವಿಶೇಷ ಮಕ್ಕಳ ಸಮನ್ವಯ ತರಗತಿ, ಶ್ರವಣ ನ್ಯೂನತೆಯ ಮಕ್ಕಳ ತರಬೇತಿ ವಿಭಾಗವಾದ ವಾಕ್ ಶ್ರವಣ ವಿಭಾಗ, ಆಟಿಸಂ ಮಕ್ಕಳ ತರಬೇತಿ ವಿಭಾಗ, ದೈಹಿಕ ನ್ಯೂನತೆಯ ವಿದ್ಯಾರ್ಥಿಗಳ ತರಬೇತಿಯ ಫಿಸಿಯೋಥೆರಪಿ ವಿಭಾಗ ವೃತ್ತಿ ತರಬೇತಿಯ ಚಿತ್ರಕಲಾ ವಿಭಾಗಗಳನ್ನು ವೀಕ್ಷಿಸಿದರು.

ಬಳಿಕ ಅವರು ವಿದ್ಯಾರ್ಥಿಗಳು ಹಾಗೂ ಶಿಕ್ಷಕರೊಡನೆ ಸಂವಹನ ನಡೆಸಿದರು.

ಭೇಟಿ ನೀಡಿದ ತಂಡದಲ್ಲಿ ಸಾಂಸ್ಕೃತಿಕ ಭಿನ್ನತೆ ಹಾಗೂ ವಿಶೇಷ ಅಗತ್ಯದ ಬಗೆಗಿನ ಸಂಶೋಧಕ ಫ್ರಾಂಕ್ ರೆಂಡರ್ಸ್, ಬೆಲ್ಜಿಯಂ ಗೆಂಟ್ ಡಾನ್ ಬಾಸ್ಕೊ ಸ್ಕೂಲ್‌ನ ಭೌಗೋಳ ಶಾಸ್ತ್ರ ಅಧ್ಯಾಪಕ ಸ್ಟಿಫಾನಿ ವೆರ್ಪ್ಲೇಟ್ಸ್, ಫ್ರೆಂಚ್ ಭಾಷಾ ಅಧ್ಯಾಪಕ ಕಿಮ್ ಹೈಜ್, ಇಂಡಿಯಾ ಪ್ಲಾಟ್‌ಫಾರ್ಮ್ ಗೆಂಟ್ ಯುನಿವರ್ಸಿಟಿ ಉಪನಿರ್ದೇಶಕ ನೀಲ್ ಡಿ'ಗೆರ್ಸೆಮ್, ಸಮನ್ವಯಕಾರರಾದ ಜೋಲಿನ್ ವೆಂಡರ್ ಬ್ರೋಕ್, ಆನ್ನೆ ಕಾರ್ಡಿನಲ್, ಇಂಡಿಯಾ ಪ್ಲಾಟ್ ಫಾರ್ಮ್ ಗೆಂಟ್ ಯುನಿವರ್ಸಿಟಿಯ ಮುಖ್ಯ ಸಂಚಾಲನಾಧಿಕಾರಿ ಸಂದೀಪ್ ಕುಮಾರ್ ಶೆಟ್ಟಿ ತಂಡದಲ್ಲಿದ್ದರು.

ಶಾಲೆಯ ಕಾರ್ಯದರ್ಶಿ ಪ್ರೊ| ಎಸ್. ರಾಜೇಂದ್ರ ಶೆಟ್ಟಿ ಹಾಗೂ ಆಡಳಿತಾಧಿಕಾರಿ ಗಣೇಶ್ ಭಟ್ ಮತ್ತಿತರರು ಉಪಸ್ಥಿತರಿದ್ದರು.

*Foto bijschrift: ‘Education experts from Belgium visit SDM Mangala Jyothi integrated school’*

Krantenartikel ‘Belgium cultural team visits’, *Udayavani Sudina*, 6 november 2017, verschenen online (http://epaper.udayavani.com/) en in gedrukte pers

---

# ಬೆಲ್ಜಿಯಂನ ಸಾಂಸ್ಕೃತಿಕ ತಂಡ ಭೇಟಿ



ಭೂಮಿಗೀತ ಸಂಸ್ಥೆಗೆ ಬೆಲ್ಜಿಯಂನ ಪ್ರತಿನಿಧಿಗಳು ಭೇಟಿ ನೀಡಿದರು.

**ಮಹಾನಗರ**, ನ. 6: ಭಾರತದ ಸಂಸ್ಕೃತಿ ಅಧ್ಯಯನದ ಭಾಗವಾಗಿ ಬೆಲ್ಜಿಯಂ ದೇಶದ ಹದಿನೈದು ಮಂದಿಯ ತಂಡವು ಯಾನ್ ಅವರ ನೇತೃತ್ವದಲ್ಲಿ ನಗರದ ಭೂಮಿ ಗೀತ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಗೆ ಭೇಟಿ ನೀಡಿ ಭಾರತದ ಸಾಹಿತ್ಯ, ಕಲೆ, ಸಂಗೀತ, ನೃತ್ಯ ಮೊದಲಾದ ವಿಷಯಗಳ ಕುರಿತು ಅಧ್ಯಯನ ನಡೆಸಿತು.

ಸಂಸ್ಕೃತಿ ವಿನಿಮಯದ ಅಂಗವಾಗಿ ಆಗ ಮಿಸಿದ ಈ ತಂಡವು ಭಾರತದ ಬೇರೆ ಬೇರೆ ಭಾಗಗಳಿಗೆ ತೆರಳಿ ಅಲ್ಲಿನ ಭಾಷೆ, ಆಹಾರ ವೈವಿಧ್ಯ, ಜಾನಪದ, ಉಡುಗೆ-ತೊಡುಗೆ ಹಾಗೂ ಬದುಕಿನ ಕುರಿತು ಕೂಡ ಅದ.ಯನ ನಡೆಸುತದೆ.

## ಭಾರತದ ಸಂಸ್ಕೃತಿಯ ಪರಿಚಯ

‘ಭೂಮಿಗೀತ’ ಸಂಸ್ಥೆಯ ಡಾ। ವಸಂತ ಕುಮಾರ ಪೆರ್ಲ, ಶೈಲಾಕುಮಾರಿ, ಅರ್ಥಾ ಪೆರ್ಲ, ಅಯನಾ ಪೆರ್ಲ, ಆಗಮ ಮೊದಲಾದವರು ಭಾರತೀಯ ಕುಟುಂಬ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆಗಳು, ಗುರುಕುಲ ಮಾದರಿಯ ಶಿಕ್ಷಣ ವ್ಯವಸ್ಥೆ ಮತ್ತು ವೇದಗಳ ಕುರಿತು ಹಾಗೂ ಸಂಸ್ಕೃತಿ ಪರಂಪರೆಗಳು ಹರಿದು ಬರುವ ಕ್ರಮ, ಸಾಹಿತ್ಯ, ಸಂಗೀತ, ನೃತ್ಯ ಮೊದಲಾದ ವಿಷಯಗಳ ಕುರಿತು ವಿವರಣೆ ಹಾಗೂ ಪ್ರಾತ್ಯಕ್ಷಿಕೆಗಳ ಮೂಲಕ ತಂಡಕ್ಕೆ ಅಗತ್ಯ ವಿವರಗಳನ್ನು ನೀಡಿದರು. ತಂಡದ ಸಂಯೋಜಕರಾಗಿ ಸಂದೀಪ್ ಶೆಟ್ಟಿ ಹಾಗೂ ಗಾಯತ್ರಿ. ಸಹಕರಿಸಿದರು.

*Foto bijschrift: ‘Belgian delegates meet Bhumigeetha team’*

Krantenartikel ‘Belgian educational team visits SDM Pre University College’, *Udayavani Sudina*, 8 november 2017, p. 3



ಬೆಳ್ತಂಗಡಿ: ಬೆಲ್ಜಿಯಂನ ಶೈಕ್ಷಣಿಕ ಅಧ್ಯಯನ ತಂಡ ಉಜಿರೆ ಶ್ರೀ ಧ. ಮಂ. ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ, ಪ್ರೊ| ಆನ್‌ಕಾರ್ಡಿನೇಲ್ ಅವರ ನೇತೃತ್ವದಲ್ಲಿ ತಂಡವು ಕಾಲೇಜಿನ ಚಟುವಟಿಕೆಯನ್ನು ಸಮೀಕ್ಷಿಸಿತು. ಸಂವಹನ ಕಾರ್ಯಕ್ರಮದಲ್ಲಿ ಕಾಲೇಜಿನ ಆಂಗ್ಲಭಾಷಾ ಪ್ರಾಧ್ಯಾಪಕರು, ವಿದ್ಯಾರ್ಥಿಗಳೊಂದಿಗೆ ಶೈಕ್ಷಣಿಕ, ಸಾಂಸ್ಕೃತಿಕ ವಿಷಯಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಪ್ರೊ|. ಎನ್. ದಿನೇಶ್ ಚೌಟ, ಆಂಗ್ಲಭಾಷಾ ವಿಭಾಗದ ಮುಖ್ಯಸ್ಥೆ ಸೀಮಾ ಪಿ., ಪ್ರಾಧ್ಯಾಪಕರು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

## ಡಿ. 23ರಂದು ವಾರ್ಷಿಕೋತ್ಸವ

ಪುತ್ತೂರು ನ. 7: ಪುತ್ತೂರು ಗೌಡ ಸೇವಾ ಸಂಘದ ವಾರ್ಷಿ… ಡಿ. 23ರಂದು ತೆಂಕಿಲ ಗೌಡ ಸಮುದಾಯ … ಜರಗಲಿದ್ದು, ಆ ವೇಳೆ … ಆದಿಚುಂಚನಗಿರಿ ಮಠದ … ಡಾ| ನಿರ್ಮಲಾನಂದನಾಥ… ಅವರ ಗ್ರಾಮ ಭೇಟಿ ಕಾ… ಪುಸ್ತಕ ಬಿಡುಗಡೆ ನಡೆಯ… ಶ್ರೀ ಕ್ಷೇತ್ರ ಆದಿ… ಮಠದ ಪೀಠಾಧ್ಯ… ನಿರ್ಮಲಾನಂದನಾಥ ಭಾಗವಹಿಸಲಿದ್ದಾರೆ.